ಆದದ್ದು ಹೇಗೆ ಎಂಬುದನ್ನು ಶ್ರೀವಿದ್ಯಾ ವಿವರಿಸುವುದು ಹೀಗೆ:

‘ಅದು 2016ರ ದೀಪಾವಳಿ ಹಬ್ಬದ ಸಮಯ. ರೆಸಾರ್ಟ್‌ನಲ್ಲಿ ತರಬೇತಿ ನೀಡುವಾಗ ನಡೆದ ಸಣ್ಣ ಸಮಾರಂಭದಲ್ಲಿ ಅತಿಥಿ ಹಾಗೂ ಆಹ್ವಾನಿತರಿಗೆ ಉಡುಗೊರೆಯಾಗಿ ಕ್ಯಾಂಡಲ್ಸ್ ಕೊಡೋಣ ಎಂದು ತೀರ್ಮಾನ ಮಾಡಿದೆವು. ಸುಮಾರು 200 ಕ್ಯಾಂಡಲ್ಸ್ ಬೇಕಿತ್ತು. ನಾವಿದ್ದ ಕಡೆ ಎಲ್ಲ ಅಂಗಡಿಗಳಲ್ಲಿ ಹುಡುಕಿದೆವು. ಕ್ಯಾಂಡಲ್ಸ್ ಸಿಗಲೇ ಇಲ್ಲ. ಇದನ್ನೇ ಸವಾಲಾಗಿ ಸ್ವೀಕರಿಸಿ ನಾವೇ ಕ್ಯಾಂಡಲ್ ತಯಾರಿಸಲು ಬೇಕಾದ ವ್ಯಾಕ್ಸ್, ಅರೋಮ, ಕಲರ್ ಎಲ್ಲ ತಂದು ಕ್ಯಾಂಡಲ್ ತಯಾರಿಸಿ ಗಿಫ್ಟ್ ಕೊಟ್ಟೆವು. ಎಲ್ಲರಿಗೂ ಖುಷಿಯಾಗಿತ್ತು. ಅಲ್ಲಿಂದ ಮತ್ತೆ ಕ್ಯಾಂಡಲ್ ಮಾಡೋದನ್ನೇ ಉದ್ಯಮವನ್ನಾಗಿ ಮಾಡುವ ನಿರ್ಧಾರ ಮಾಡಿದೆ.

ಸಣ್ಣವಳಿದ್ದಾಗ ಅಮ್ಮ ಮನೆಯಲ್ಲಿ ಕ್ಯಾಂಡಲ್ ತಯಾರಿಸುತ್ತಿದ್ದುದನ್ನು ಕಣ್ಣಾರೆ ಕಂಡಿದ್ದೆ. ಹೀಗಾಗಿ ಕ್ಯಾಂಡಲ್ ತಯಾರಿಕೆ ಕಲೆ ನನಗೆ ತಿಳಿದಿತ್ತು. ಬೆಂಗಳೂರಿನಲ್ಲಿ ನಾನಿದ್ದ ಜಾಗದಲ್ಲಿದ್ದ ಅಪಾರ್ಟ್‌ಮೆಂಟ್‌ಗಳಲ್ಲಿ ಕೆಲಸವಿಲ್ಲದೆ ಖಾಲಿ ಕುಳಿತ ಮಹಿಳೆಯರನ್ನು ಕರೆದು ಕ್ಯಾಂಡಲ್ ಮಾಡುವ ತರಬೇತಿ ನೀಡಿದೆ. ಒಂದೇ ವಾರದಲ್ಲಿ ಎರಡೂವರೆ ಸಾವಿರ ಕ್ಯಾಂಡಲ್ ತಯಾರಾಯ್ತು. ಅಷ್ಟೂ ಮಾರಾಟವೂ ಆಯ್ತು. ಕ್ಯಾಂಡಲ್ ಅನ್ನು ಬರೀ ಬೆಳಕಿಗೋಸ್ಕರ ಬಳಕೆ ಮಾಡುವುದಿಲ್ಲ ಎಂಬುದನ್ನು ಅರಿತಿದ್ದೆ.ಕರೆಂಟ್ ಹೋದಾಗ ಬೆಳಕಿಗಾಗಿ ಯುಪಿಎಸ್, ರಿಚಾರ್ಜ್ ಲೈಟ್ ಇಟ್ಟುಕೊಂಡವರು ಸಹ ಕ್ಯಾಂಡಲ್ ಖರೀದಿ ಮಾಡುತ್ತಾರೆ. ಈಗೀಗ ಡಿನ್ನರ್ ಲೈಟ್, ಇಂಟೀರಿಯರ್ ಡೆಕೊರೇಷನ್, ರಂಗೋಲಿ ಮಧ್ಯೆ ಅಲಂಕಾರಕ್ಕಾಗಿ,


ಮೇಣದ ಗೊಂಬೆಗಳು


ಕ್ಯಾಂಡಲ್ ತಯಾರಿಕೆಯಲ್ಲಿ...


ಅಪೂರ್ವ ಜೋಡಿ, ಕಪ್ಪು–ಬಿಳಿ ಮೋಡಿ

ಬರ್ತ್‌ಡೇ ಆಚರಣೆಗಾಗಿ ಎಲ್ಲರೂ ಕ್ಯಾಂಡಲ್ ಬಳಸುತ್ತಾರೆ. ವಿದೇಶಗಳಲ್ಲಿ ಬಾತ್ ರೂಮ್, ಲಿವಿಂಗ್ ರೂಮ್‌ಗಳಲ್ಲಿ ಇಂಟೀರಿಯರ್ ಡೆಕೊರೇಷನ್‌ಗಾಗಿ ಬಳಸುವರು. ಇದನ್ನೇ ಈಗ ಭಾರತೀಯರೂ ಅನುಕರಣೆ ಮಾಡುತ್ತಿದ್ದಾರೆ. ಹೀಗಾಗಿ ಕ್ಯಾಂಡಲ್‌ಗೆ – ಅದರಲ್ಲೂ ಅರೋಮ ಕ್ಯಾಂಡಲ್, ಫ್ಲೋರಲ್ ಕ್ಯಾಂಡಲ್, ಫ್ಲೋಟಿಂಗ್ ಕ್ಯಾಂಡಲ್‌ಗೆ ಬೇಡಿಕೆ ಹೆಚ್ಚಿದೆ. ಅಲ್ಲದೆ ಪ್ರಪಂಚದ ಶೇ. 40ರಷ್ಟು ಕ್ಯಾಂಡಲ್‌ಗಳು ವಿದೇಶಗಳಿಗೆ ಭಾರತದಿಂದಲೇ ರಫ್ತಾಗುತ್ತಿದೆ ಎಂಬುದು ನನಗೆ ತಿಳಿದಿತ್ತು. ಈ ಜ್ಞಾನವನ್ನು ಚೆನ್ನಾಗಿ ಎನ್‌ಕ್ಯಾಶ್ ಮಾಡಿಕೊಂಡೆ.

ಈಗ ನಾವು ಆರ್ಗಾನಿಕ್ ಕ್ಯಾಂಡಲ್, ಅರೋಮ, ವ್ಯಾಕ್ಸ್, ಸೋಯಾ ವ್ಯಾಕ್ಸ್... ಮುಂತಾದವುಗಳನ್ನು ಬಳಸಿ ಕ್ಯಾಂಡಲ್ಸ್ ತಯಾರಿಸುತ್ತೇವೆ. ಶಿವಮೊಗ್ಗದ ವಿಜಯ್ ಎಂಬವರ ಬಳಿ ಅರೊಮ್ಯಾಟಿಕ್ ಕ್ಯಾಂಡಲ್ ಹೇಗೆ ವಿಭಿನ್ನವಾಗಿ ಮಾಡಬಹುದು ಎಂಬುದನ್ನು ತರಬೇತಿ ಪಡೆದು, ಈಗ ನಾವೇ ಹಲವು ವಿಧದ ಕ್ಯಾಂಡಲ್ ತಯಾರಿಸಲು ಆರಂಭಿಸಿದ್ದೇವೆ. ಮನೆಯಲ್ಲಿ ಬಾಣಂತಿಯರಿದ್ದರೆ ಅವರಿಗೂ ಮಗುವಿಗೂ ಇನ್‌ಫೆಕ್ಷನ್ ಆಗದೇ ಇರುವಂಥ ಕ್ಯಾಂಡಲ್‌ಗಳು, ಕಾಫಿ ಪರಿಮಳದ ಕ್ಯಾಂಡಲ್, ಮಕ್ಕಳು ಇಷ್ಟಪಡುವ ವರ್ಣರಂಜಿತ ಕ್ಯಾಂಡಲ್‌ಗಳನ್ನು ತಯಾರು ಮಾಡ್ತೀವಿ.

ಕೊರೊನಾ ಸಮಯದಲ್ಲಿ ಕೆಲಸ ಕಳೆದುಕೊಂಡ ಶಾಲಾ ಶಿಕ್ಷಕರಿಯರೂ ಸೇರಿದಂತೆ ಒಟ್ಟು 13 ಮಹಿಳೆಯರಿಗೆ ಕೆಲಸ ಕೊಟ್ಟಿದ್ದೇನೆ. ಓದು ಮಧ್ಯೆ ನಿಲ್ಲಿಸಿದ ಹೆಂಗಸರು, ಆಟೊ ಡ್ರೈವರ್ ಹೆಂಡತಿಯರು ಸಹ ಕ್ಯಾಂಡಲ್ ತಯಾರಿಸುವುದರಲ್ಲಿ ಆಸಕ್ತಿ ತೋರಿದ್ದಾರೆ. ಒಟ್ಟು 600 ವೆರೈಟಿ ಕ್ಯಾಂಡಲ್ ಮಾಡ್ತೀವಿ. ಮಾರಿಷಸ್, ಶ್ರೀಲಂಕಾ, ಬ್ಯಾಂಕಾಕ್, ಥಾಯ್ಲೆಂಡ್‌ಗಳಿಗೆ ರಫ್ತು ಮಾಡ್ತೀವಿ. ಸದ್ಯ ಒಂದು ತಿಂಗಳಿಗೆ ಎರಡು ಟನ್ ಕ್ಯಾಂಡಲ್ಸ್ ಸೇಲ್ ಆಗುತ್ತಿದೆ. ಉದ್ಯಮವೂ ಚೆನ್ನಾಗಿ ನಡೆಯುತ್ತಿದೆ. ಮಹಿಳೆಯರಿಗೆ ಆರ್ಥಿಕ ಭದ್ರತೆಯೂ ಸಿಕ್ಕಿದಂತಾಗಿದೆ.

ಈಗ ಮೈಸೂರಿನಲ್ಲಿ ‘ಲಕ್ಷುರಿ ಕ್ಯಾಂಡಲ್’ ಎಂಬ ಔಟ್‌ಲೆಟ್ ತೆರೆದಿದ್ದೇನೆ. ಬದುಕಿನಲ್ಲಿ ಗುರಿ ಸಾಧಿಸಿದ ಸಂತೃಪ್ತಿ ನನ್ನಲ್ಲಿದೆ. ಕೆಲಸವಿಲ್ಲದೆ, ಗಳಿಕೆಯೂ ಇಲ್ಲದೆ ಕೊರಗುತ್ತಾ ಕುಳಿತುಕೊಳ್ಳುವ ಮಹಿಳೆಯರಿಗೆ ಬದುಕಿನ ಹಾದಿ ತೋರಿದ ತೃಪ್ತಿಯೂ ನನ್ನಲ್ಲಿದೆ’.

ಶ್ರೀವಿದ್ಯಾ ತನ್ನ ಬದುಕಿನ ಯಶಸ್ಸಿನ ಕಥೆ ಕೇಳಿದಾಗ, ಮನೆಯಲ್ಲಿ ಖಾಲಿ ಕುಳಿತ ಮಹಿಳೆಯರು ಕ್ಯಾಂಡಲ್ ಉದ್ಯಮದಂತಹ ಯಾವುದಾದರೂ ಕೆಲಸದಲ್ಲಿ ಯಾಕೆ ತೊಡಗಿಸಿಕೊಳ್ಳಬಾರದು? ಈ ಮೂಲಕ ಆರ್ಥಿಕವಾಗಿ ಏಕೆ ಸದೃಢರಾಗಬಾರದು ಎನಿಸಿದ್ದು ಸುಳ್ಳಲ್ಲ.

ಪ್ರತಿಕ್ರಿಯಿಸಿ: feedback@sudha.co.in



ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ, ಪಂಚ ಮಹಾ ಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ಮದುವೆ, ಸಂತಾನ, ದಾಂಪತ್ಯ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಇನ್ನಿತರ ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಕಟ, ದೀರ್ಘಾವಧಿ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
9880444450